ತಾಂತ್ರಿಕ ಅಧಿಕ್ಷಕರು (2)	2	
ಸ್ಟೋರ್ ಸೂಪರ್ ವೈಸರ್ (2)	2	
ವಿಸ್ತರಣಾಧಿಕಾರಿಗಳು ದರ್ಜೆ–III (10)		
ಎಂ.ಐ.ಎಸ್. ಅಸಿಸ್ಟೆಂಟ್ (1)		
ಸೀನಿಯರ್ ಅಸಿಸ್ಟೆಂಟ್ (1)		
ಡೈರಿ ಸೂಪರ್ ವೈಸರ್ (2)	14	
ಕಂಪ್ಯೂಟರ್ ಆಪರೇಟರ್ (2)		
ಕೆಮಿಸ್ಟ್ ದರ್ಜೆ–II(1)		
ಡೈರಿ ಟೆಕ್ನಿಷಿಯನ್ ದರ್ಜೆ–I(2)		
ಆಡಳಿತ ಸಹಾಯಕ ದರ್ಜೆ–II(1)		
ಮಾರುಕಟ್ಟೆ ಸಹಾಯಕ ದರ್ಜೆ–II(2)	8	
ಡೇರಿ ಟೆಕ್ನಿಷಿಯನ್ (6)	6	
ಆಡಳಿತ ಸಹಾಯಕ ದರ್ಜೆ–III(3)		
ಲೆಕ್ಕ ಸಹಾಯಕ ದರ್ಜೆ–III(1)		
ಲ್ಯಾಬ್ ಟೆಕ್ನಿಷಿಯನ್ (2)		
ಬೆರಳಚ್ಚುಗಾರರು (3)		
ಚಾಲಕರು (1)	10	
ಒಟ್ಟು		53

ಬ್ಯಾಕ್‌ಲಾಗ್ ಹುದ್ದೆಗಳ ವಿವರ

4159 (4604) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಭರ್ತಿಮಾಡಲು ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳೆಷ್ಟು: (A,B,C,D ಹುದ್ದೆವಾರು ವಿವರ ನೀಡುವುದು)

ಆ) ಈ ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಮಾಡದೇ ಇರಲು ಕಾರಣವೇನು;

ಇ) ನೇರನೇಮಕಾತಿ ಮಾಡಿಕೊಳ್ಳುವಾಗ ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಿಲ್ಲವೆ, ಇಲ್ಲದೆ ಇದ್ದಲ್ಲಿ ಕಾರಣಗಳೇನು ಕಳೆದ 3 ವರ್ಷಗಳಲ್ಲಿ ನೇರ ನೇಮಕಾತಿ ಮಾಡಿಕೊಳ್ಳಲಾದ A.B.C.D ಹುದ್ದೆವಾರು ವಿವರ ನೀಡುವುದು?

ಶ್ರೀ ವಿ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ದಿನಾಂಕ: 23.7.2003ರಲ್ಲಿದಂತೆ ವಿವಿಧ ಸರ್ಕಾರಿ ಇಲಾಖೆ ನಿಗಮ/ಮಂಡಳಿ/ವಿಶ್ವವಿದ್ಯಾನಿಲಯಗಳು/ಸಹಕಾರಿ ಸಂಸ್ಥೆಗಳು/ಅನುದಾನಿತ ಸಂಸ್ಥೆಗಳಲ್ಲಿ ಗುರುತಿಸಿದ ಒಟ್ಟು ಬ್ಯಾಕ್‌ಲಾಗ್ ಹುದ್ದೆಗಳು 16994 (ಪ.ಜಾತಿ–12896, ಪ.ವರ್ಗ–4098) ಅದರಲ್ಲಿ ಸರ್ಕಾರಿ ಇಲಾಖೆಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ 12021 (ಪ.ಜಾತಿ 9258 + ಪ.ವರ್ಗ–2763) (A.B.C.D ಹುದ್ದೆವಾರು ವಿವರ ಲಗತ್ತಿಸಿದೆ.)

ಆ) ಮೇಲ್ಕಂಡ ಸಂಸ್ಥೆಗಳಲ್ಲಿ ಗುರುತಿಸಲಾದ ಒಟ್ಟು 16994 ಹುದ್ದೆಗಳಲ್ಲಿ ದಿನಾಂಕ: 23.7.2003ರಲ್ಲಿದ್ದಂತೆ ಒಟ್ಟು 10630 ಹುದ್ದಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು ಇದರಲ್ಲಿ 6561 ಹುದ್ದೆಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ ಉಳಿದ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ.

ಇ) ವಿವಿಧ ಕಾರಣಗಳಿಂದ ಪ.ಜಾತಿ, ಪ.ವರ್ಗದವರಿಗೆ ಮೀಸಲಿರಿಸಿದ ಹುದ್ದೆಗಳನ್ನು ನೇಮಕ ಮಾಡದ ಕಾರಣ ತುಂಬದೆ ಬಾಕಿ ಉಳಿದಿದೆ ನೇರನೇಮಕಾತಿ ಮತ್ತು ಇತರೆ ವರ್ಗದ ಹುದ್ದೆಗಳನ್ನು ಪ್ರತ್ಯೇಕವಾಗಿ ಪರಿಶೀಲಿಸುವುದನ್ನು ನಿರ್ವಹಿಸಿರುವುದಿಲ್ಲ ಸರ್ಕಾರವು ವಿಶೇಷ ಆದೇಶ ಹೊರಡಿಸಿ ನೇರನೇಮಕಾತಿ ಹಾಗೂ ಇತರೆ ಹಿಂಬಾಕಿ ಎಲ್ಲಾ ಪ.ಜಾತಿ.ಪ.ಪಂಗಡಗಳ ಹುದ್ದೆಗಳನ್ನು ತುಂಬುವ ಕ್ರಮ ಕೈಗೆತ್ತಿಗೊಂಡಿದೆ. ಸಂಬಂಧಿಸಿದ ಇಲಾಖೆಗಳಿಂದ ಎ.ಬಿ.ಸಿ.ಡಿ. ಗುಂಪುವಾರು ಹುದ್ದೆಗಳನ್ನು ತುಂಬಿರುವ ಮಾಹಿತಿಯ ವಿವರಗಳನ್ನು ಪಡೆದುಕೊಳ್ಳಲಾಗುತ್ತದೆ.

ಶಿವಮೊಗ್ಗ ಜಿಲ್ಲೆಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಬಂದ ಆದಾಯ

4160 (4605) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟೆಷ್ಟು ವಿಸ್ತೀರ್ಣದಲ್ಲಿ ಹೊಳೆ ಮರಳು, ಮ್ಯಾಂಗನೀಸ್ ಮತ್ತು ಕಲ್ಲು ಬಂಡೆಗಳ ಕ್ವಾರಿಯನ್ನಲೀಸ್ ಆಧಾರದ ಮೇಲೆ ದಿನಾಂಕ: 1.4.1999 ರಿಂದ ಈ ತಹಲ್ ವರೆವಿಗೂ ಯಾರು ಯಾರಿಗೆ ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು);

ಆ) ಮೇಲ್ಕಂಡ ಲೀಸ್‌ನಿಂದ ದಿನಾಂಕ 1.4.99 ರಿಂದ ಈ ತಹಲ್‌ವರೆವಿಗೂ ಸರ್ಕಾರಕ್ಕೆ ಬಂದ ಆದಾಯವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಜಿಲ್ಲೆಯಲ್ಲಿ ಮ್ಯಾಂಗನೀಸ್ ಖನಿಜಕ್ಕೆ ಗುತ್ತಿಗೆಗಳನ್ನು ನೀಡಿರುವುದಿಲ್ಲ. ಹೊಳೆ ಮರಳು ಕಲ್ಲು ಬಂಡೆ ಗುತ್ತಿಗೆಗಳ ವಿವರ ಅನುಬಂಧದಲ್ಲಿದೆ.

ಆ) ದಿನಾಂಕ: 01.04.1999 ರಿಂದ ಮಂಜೂರಾದ ಕಲ್ಲು ಗಣಿ ಗುತ್ತಿಗೆಗಳಿಂದ ಸರ್ಕಾರಕ್ಕೆ ಬಂದಿರುವ ಆದಾಯದ ವಿವರ ಮುಂದಿನಂತಿದೆ.

ಕ್ರ.	ತಾಲ್ಲೂಕು	1999–2000	2000–2001	2001–2002
1.	ಶಿವಮೊಗ್ಗ	1,94,416	4,00,615	8,53,355
2.	ಭದ್ರಾವತಿ	79,930	1,38,173	1,23,421
3.	ಸಾಗರ	58,235	1,54,607	1,62,355
4.	ಸೊರಬ	1,09,770	85,089	39,967
5.	ಹೊಸನಗರ	59,800	51,199	38,152
6.	ಶಿಕಾರಿಪುರ	5,376	10,000	10,000
7.	ತೀರ್ಥಹಳ್ಳಿ	10,22,947	15,50,815	9,00,786